ಮಾಡಿದರೆಂದೂ, ಮೊತ್ತಮೊದಲಿಗೆ ಪವನಳಿಗೆ ಫೋನು ಮಾಡಿದ್ದೆಂದೂ ಹೇಳುತ್ತ ಎಲ್ಲ ವಿವರ ಕೊಟ್ಟಳು. ಮದುವೆ ಉಡುಪಿಯಲ್ಲಿ, ಬಾ ಬರುತ್ತೀಯಲ್ಲ, ಬರಲೇ ಬೇಕು ಎನ್ನುವ ಒತ್ತಾಯದ ಹೇಳಿಕೆಯೂ ಆಯಿತು, ಬರದಿದ್ದರೆ ನೋಡಿಕೊ ಎಂದು ಧಮಕಿ ಕೊಟ್ಟದ್ದೂ ಆಯಿತು. ಹುಡುಗ ಯಾರು ಎಂದರೆ,

'ಆ ಸಲ ನಾನು ಅವನ ವಿಷಯ ಹೇಳಿದ್ದಲ್ವ?' ಎಂದಳು.

'ಅವನೇ. ಹೈದರಾಬಾದಿನವ, ಈಗ ಎರಡು ವರ್ಷಗಳ ಒಡನಾಟದಲ್ಲಿ ತಾವಿಬ್ಬರೂ ತುಂಬ ಹತ್ತಿರ ಬಂದಿದ್ದೇವೆ,' ಎಂದಳು.

ಪವನ ಮರುದಿನವೇ ರಜೆಗೆ ಅರ್ಜಿ ಹಾಕಿ, ಟಿಕೇಟು ಬುಕ್ ಮಾಡಿಸಿದಳು. ಮದುವೆಗಿನ್ನೂ ತಿಂಗಳ ಸಮಯವಿದ್ದರೂ, ಅದೇ ಶನಿವಾರ ಮಧ್ಯಾಹ್ನ ಆಫೀಸಿನ ಗೆಳತಿಯೊಂದಿಗೆ ಮಹಾಲಕ್ಷ್ಮಿಯ 'ನಲ್ಲಿ' ಅಂಗಡಿಗೆ ಹೋಗಿ ನಸು ಗುಲಾಬಿಯ ಮೈಗೆ ಜರಿಯ ಅಂಚು ಇರುವ ಕಾಂಜೀವರಂ ಸೀರೆಯನ್ನು ತೆಗೆದುಕೊಂಡಳು. ಜೊತೆಯಲ್ಲೇ ಅಮ್ಮನಿಗೊಂದು ಅವಳ ಇಷ್ಟದ ಕುಂಕುಮ ಕೆಂಪಿನ ಭರ್ಜರಿ ಜರಿ ಅಂಚಿನ ಸೀರೆ. ಆವತ್ತೇ ಮನೆಯ ಹತ್ತಿರ ಇದ್ದ ದರ್ಜಿಯ ಹತ್ತಿರ ರವಕೆ ಹೊಲಿಸಲು ಕೊಟ್ಟದ್ದೂ ಆಯಿತು.

ಇಷ್ಟೆಲ್ಲ ತಯಾರಿಯಾದರೂ, ಅವಳ ಮನಸ್ಸಿನ ಮೂಲೆಯಲ್ಲಿದ್ದ ಅಸ್ಪಷ್ಟ ಅಸಮಾಧಾನದ ಗೆರೆ ಅಳಿಸಿರಲಿಲ್ಲ. ವಾರ ಕಳೆದಿರಲಿಕ್ಕಿಲ್ಲ. ಅಮ್ಮನ ಫೋನು ಬಂತು. 'ಹೌದನ, ಶಮಂಗೆ ಮದುವೆ ಅಂತಲ್ಲ?' ನಿರೀಕ್ಷಿಸಿದ ಪ್ರಶ್ನೆಯೇ. ಆದರೆ, ಅದು ಬರೇ ಪ್ರಶ್ನೆಯಾಗಿರಲಿಲ್ಲ. ಅದರೊಳಗೆ ಏನೆಲ್ಲ ತುಂಬಿಕೊಂಡಿತ್ತೆಂದರೆ, ಕೇಳುವ ಪವನಳಿಗಷ್ಟೇ ಅವೆಲ್ಲ ಅರ್ಥವಾಗಬೇಕು. ಯಾರು ಹುಡುಗ? ಎಲ್ಲಿ ಮದುವೆ? ಅವಳಿಗೂ ಆಯಿತು, ಇನ್ನು ನಿನ್ನದು? ಹೀಗೆ ಆದರೆ ಹೇಗೆ? – ಇನ್ನೂ ಏನೇನೋ ಆ ಒಂದು ಪ್ರಶ್ನೆಯೊಳಗೆ ಅಡಗಿದ್ದವು. ಪವನ ಮಾತ್ರ ಅದೊಂದೂ ಅರ್ಥವಾಗದವಳಂತೆ ಕೇಳಿದ ಆ ಪ್ರಶ್ನೆಗಷ್ಟೇ ಉತ್ತರಿಸಿ, ಸುಮ್ಮನಾದಳು.

ಮತ್ತೆ ಅಮ್ಮನೇ ಉಪಾಯವಿಲ್ಲದೆ, ಉಳಿದ ಪ್ರಶ್ನೆಗಳನ್ನು ಒಂದೊಂದಾಗಿ ಕೇಳಲು ಹೊರಟಾಗ, ಮಧ್ಯದಲ್ಲಿ ತುಂಡರಿಸಿ ಪವನ ಮಾತು ಬದಲಾಯಿಸಿದಳು. 'ಮದುವೆಗೆ ಊರಿಗೆ ಬರುತ್ತಿದ್ದೇನೆ, ನಿನಗೆ ಇಲ್ಲಿಂದ ಏನಾದರೂ ಬೇಕೇ,' ಎಂದು ಕೇಳಿದಳು.

'ನಾಲ್ಕು ದಿನ ಮೊದಲೇ ಬಂದರೆ... ರಮಕ್ಕನ ಅತ್ತೆ ಮಗ ಅದೇ ಸಮಯ ಅಮೆರಿಕದಿಂದ...' ಎಂದು ಅಮ್ಮ ಹೇಳುತ್ತಿದ್ದಂತೆ ಪವನ ಫೋನನ್ನು ಕೆಳಗಿಟ್ಟಾಗಿತ್ತು. ಶಮಾಳ ಮದುವೆಗೆಂದು ಊರಿಗೇನೋ ಹೊರಟಿದ್ದಳು. ಆದರೆ, ಊರಿನಲ್ಲಿ ಇಂತಹ ಮಾತುಗಳನ್ನು ಎದುರಿಸಲು ಅವಳು ಮನಸ್ಸನ್ನು ಗಟ್ಟಿಮಾಡಿಕೊಳ್ಳಬೇಕಾಗಿತ್ತು. ಯಾರೇ ಸಿಗಲಿ, ಅವರಿಗೆ ತನ್ನ ಮದುವೆ ಮಾಡುವ ಉಮೇದು ಸಟ್ಟಂತ ಏರುತ್ತಿತ್ತು. ಅಲ್ಲೊಬ್ಬ ಅವನಿದ್ದಾನೆ, ಇಲ್ಲೊಬ್ಬ ಇವನಿದ್ದಾನೆ ಎಂದು ಸುರುವೇ. ಅವರು ಹೇಳುವುದನ್ನು ನೋಡಿದರೆ, ತಾನು ಯಾವುದೇ ಒಬ್ಬ ಗಂಡಿಗಾಗಿ ತಹತಹಿಸುತ್ತಿದ್ದೇನೋ ಎಂದೆನಿಸಬೇಕು. ತಾನು ಇಷ್ಟೆಲ್ಲ ಕಲಿತದ್ದು, ಇಷ್ಟೊಂದು ಒಳ್ಳೆಯ ಕೆಲಸದಲ್ಲಿರುವುದು, ಇವು ಯಾವವೂ ಅವರಿಗೆ ಲಕ್ಷ್ಯಕ್ಕೇ ಇಲ್ಲವೇ? ಆಫೀಸಿನಲ್ಲಿ ಎಷ್ಟೆಷ್ಟು ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಲಕ್ಷಲಕ್ಷಗಟ್ಟಲೆಯ ವ್ಯವಹಾರವನ್ನು ದಿನನಿತ್ಯವೆಂಬಂತೆ ನೋಡಿಕೊಳ್ಳುತ್ತಿದ್ದೇನೆ. ಈ ಸಾಧನೆಗಳೊಂದೂ ಮಹತ್ವದ್ದೇ ಅಲ್ಲ; ಒಬ್ಬ ಗಂಡ ಸಿಕ್ಕಿಬಿಟ್ಟಿದ್ದರೆ ಅವರಿಗೆ ತನ್ನ ಬಗ್ಗೆ ಯಾವ ಗಮನವೂ ಇರುತ್ತಿರಲಿಲ್ಲವೇನೋ ಎಂದುಕೊಂಡಳು. ಮದುವೆಯಾಗದೆಯೂ ವೃತ್ತಿಯಲ್ಲಿ ಇಷ್ಟೊಂದು ಏಳಿಗೆ, ಯಶಸ್ಸು, ದೇಶವಿದೇಶಗಳ ಪರ್ಯಟನ, ಸ್ವಂತ ಮನೆ – ಅಂದರೆ ಬದುಕೇನೂ ನಿಂತ ನೀರಂತೂ ಅಲ್ಲ, ಅಲ್ಲೊಬ್ಬ ಗಂಡಸಿಲ್ಲ ಎಂಬುದಷ್ಟೇ...